



ಮುಂಬಯಿಯಲ್ಲಿರುವ ಗಾಲಿಬ್‌ನ ಮ್ಯೂರಲ್ ಕಲಾಕೃತಿ

ದಡಕಪ್ಪಳಿಸಿ ಚುಂಬಿಸುವ ಕಡಲಲೆಗಳ ಮೊರೆವ ಯಾನ; ಹಸಿರೆಲೆಗಳ ಮರೆಯಿಂದ ಇಣುಕಿ ಹರಿಸುವ ಗಿಳಿ ಕೋಗಿಲೆಗಳ ರಸಗಾನ. ಒಡಲೊಳಗಿಳಿಸಿಕೊಂಡ ಮದಿರೆಯ ನಿಶಾಗಾನ.

ಮಿರ್ಜಾ ಅಸಾದುಲ್ಲಾಬೇಗ್ ಖಾನ್ ಗಾಲಿಬ್‌ನ ಕಾವ್ಯದ ಇರಿಯುವಿಕೆಯೂ ಅದೆಷ್ಟು ಆಳವಾಗಿತ್ತೆಂದರೆ, ಸ್ವತಃ ಮಹಾಕವಿಗಳಲ್ಲದೆ, ಆಳುವ ಅರಸರೇ ಕೇಳಿ ಬೆಚ್ಚಿಬೀಳುತ್ತಿದ್ದರು. ಆ ಪ್ರಸಂಗವೊಂದು ಹೀಗಿದೆ: ಮೊಗಲರ ದೊರೆಯ ಮಗ ಜಾಫರ್‌ನ ಕಾವ್ಯಗುರುವಾಗಿದ್ದ ಮಹಾಕವಿ ಜೈಕ್. ಅರಮನೆಗೆ ಹೋಗುವ ಬೀದಿಯಲ್ಲೊಮ್ಮೆ ಅಕಸ್ಮಾತಾಗಿ ಸಿಕ್ಕ ಜೈಕ್ ಕವಿಯ ಪಲ್ಲಕ್ಕಿಯಲ್ಲಿನ ಮೆರವಣಿಗೆಯನ್ನು ಕಂಡ ಗಾಲಿಬ್, ‘ಮಹಾರಾಜರ ಕೃಪೆಯೆಂದು ಈ ಬೀಗುವಿಕೆಯೇ’ ಎಂದು ಹಾಡಿದ. ದೂರು ದರ್ಬಾರಿಗೆ ಹೋಯಿತು. ಆಹ್ವಾನಿಸಿದ ಕವಿಗೋಷ್ಠಿಗೆ ಮುನ್ನ ಇದರ ಬಗ್ಗೆ ಸ್ಪಷ್ಟನೆ ಕೇಳಿದಾಗ ಗಾಲಿಬನೆಂದ – ‘ಜೈಕ್ ಕವಿಗೆ ನಾನು ಅಪಮಾನಿಸಿಲ್ಲ’. ಹಾಗಾದರೆ ಆ ಕವಿತೆಯ ಸಾಲನ್ನೊಮ್ಮೆ ಪೂರ್ಣವಾಗಿ ಹೇಳು ಎಂದು ಒತ್ತಾಯಿಸಿದಾಗ ಗಾಲಿಬ್ ತಡಮಾಡದೆ ಆ ಆಶುಕವಿತೆಯನ್ನು ಮುಂದುವರೆಸಿದ. ‘ಮಹಾರಾಜರ ಕೃಪೆಯೆಂದು ಈ ಬೀಗುವಿಕೆಯೇ, ಗಾಲಿಬ್ ನಿನಗಿದನ್ನು ಹೊರತುಪಡಿಸಿ ಬೇರೇನಿದೆ ಬದುಕಲು’ ಎಂದು ಹಾಡಿಬಿಟ್ಟ. ಅಲ್ಲಿದ್ದ ಚಕ್ರವರ್ತಿಯಾದಿಯಾಗಿ ಸಭಾಸದರೆಲ್ಲರೂ ಮೆಚ್ಚುಗೆಯ ಸುರಿಮಳೆಗೈದರು.

ಯೋಧನ ಕುಟುಂಬದಲ್ಲಿ ಜನಿಸಿ ಖಡ್ಗ ಹಿಡಿಯಬೇಕಾಗಿದ್ದವನು ಕತ್ತಿಯಂತೆ ಬಳಸಬಹುದಾದ ಲೇಖನಿಯನ್ನು ಹಿಡಿದೆ ಎಂದು ಬರೆದುಕೊಳ್ಳುತ್ತಾನೆ. ಗಾಲಿಬ್ ಐದು



ವರ್ಷದವನಿರುವಾಗಲೇ, ತನ್ನ ತಂದೆ ಮಿರ್ಜಾ ಅಬ್ದುಲ್ಲಾ ಬೇಗ್ ಅವರನ್ನು ಕಳೆದುಕೊಂಡ. ಆಶ್ರಯದಾತನಾದ ಚಿಕ್ಕಪ್ಪ ನಸರುಲ್ಲಾ ಬೇಗ್ ಖಾನ್‌ರು ಗಾಲಿಬ್ ಒಂಬತ್ತು ವರ್ಷದವನಿದ್ದಾಗ ತೀರಿಹೋದರು. ಇಂತಹ ವಿಧಿಯನ್ನು ಕುರಿತೇ ಗಾಲಿಬ್ ಹಾಡಿದ ಹಾಡನ್ನು ಕೇಳಿ:

**ದೈತ್ಯ ಅಲೆಗಳ ಕದನದಲ್ಲಿ**
**ಸುಳಿಗೆ ಸಿಕ್ಕಿದೆ ನಾವೆ**
**ನಾವಿಕ ನಿದ್ದೆ ಹೋಗಿದ್ದಾನೆ**
**ವಿಧಿಯನ್ನೇಕೆ ಜರಿಯುವೆ ಗಾಲಿಬ್?**

ಹನ್ನೆರಡು ಸಾವಿರ ದ್ವಿಪದಿಗಳನ್ನು ರಚಿಸಿದ ಗಾಲಿಬ್ – ಕಸೀದ್, ರೇಖ್ತಾ, ಗಜಲ್, ರುಬಾಯಿ, ದ್ವಿಪದಿಗಳಂತಹ ಕಾವ್ಯಾಕ್ಷಿಯರನ್ನೆಲ್ಲ ಮದಿರೆಯಂತೆ ಪ್ರೀತಿಸಿ ಅವರ ನಶೆಯನ್ನೇರಿಸಿಕೊಂಡ. ಗಾಲಿಬನ ಬದುಕೇ ಹೋರಾಟದ ಮಹಾಕಾವ್ಯವಾಗಿತ್ತು. ಪರಿಶ್ರಮದಿಂದ ತೋಡಿದ ಬಾವಿಯ ಒರತೆಯಂತೆ ನಿತ್ಯವೂ ಕೂಲಿಗಾಗಿ ಕಾಯುವಂತಹ ದುಸ್ಥಿತಿಯನ್ನು ಅನುಭವಿಸಿ ಮಾಗಿದ. ದೆಹಲಿಯ ಸಿಂಹಾಸನದ ಪಕ್ಕದಲ್ಲಿದ್ದರೂ ಬಹುಪಾಲು ಅನಾಮಿಕನಾಗಿಯೇ ಬದುಕಿದ. ಚಿಕ್ಕಪ್ಪನ ರೂ. 750 ಪಿಂಚಣಿಯಲ್ಲಿಯೇ ತನ್ನ ಬಾಳನ್ನು ಹಾಸಿಕೊಂಡು, ಬರೆದ ಕಾವ್ಯದ ಹಾಳೆಗಳನ್ನೇ ಹೊದ್ದು ಮಲಗಿದ ಮಹಾ ಫಕೀರ.

ಹೊತ್ತಲ್ಲದ ಹೊತ್ತಿನಲ್ಲಿ ಮದುವೆಯಾಗಿ ಬಾಲ್ಯದ ಗೆಳತಿಯನ್ನೇ ಸತಿಯನ್ನಾಗಿ ಕಟ್ಟಿಕೊಂಡು ತಿರುಗಿದವನ ಬಾಳಿಗೆ ಕಾವ್ಯವೇ ಬೆಳಕನ್ನು ನೀಡಿತು. ದೆಹಲಿಯಲ್ಲಿನ ಮಸೀದಿಯ ಕತ್ತಲೆಯ ದಾರಿಯಲ್ಲಿ ನಡೆಯುವವನ ಕೈಹಿಡಿದು ಮುನ್ನಡೆಸಿದ್ದು ಗಜಲ್‌ಗಳೇ. ತನ್ನ ಕಾವ್ಯಕ್ಕೊಂದು ಜನಮೆಚ್ಚುಗೆ ದೊರೆತು ದೊರೆಯ ಪುರಸ್ಕಾರ ದಕ್ಕಿಸಿಕೊಂಡರೆ ಸಾಕು. ಅಂದಿನ ಅವನ ಗುಲಾಬು, ಶರಾಬಿ, ರೊಟ್ಟಿಗೆ ತಾಪತ್ರಯವಿರಲಿಲ್ಲ. ಇದಷ್ಟೇ ಅವನ ಬದುಕಿನ ಚಿಂತೆಯಾಗಿತ್ತು.

‘ಬಾರದು ಬಪ್ಪುದು, ಬಪ್ಪುದು ತಪ್ಪದು’ ಎಂಬಂತೆಯೇ ಬದುಕಿದ ಮಿರ್ಜಾ ಗಾಲಿಬ್ ದೆಹಲಿಯ ಸಂದಿಗೊಂದಿಗಳನ್ನು ತಿರುಗಿದ. ಬೀದಿ ಬದಿಯ ಸಾಮಾನ್ಯರ ಸಂತೆಯಲ್ಲಿದ್ದೂ ಸಂತನಾದ. ಲೌಕಿಕ ಬದುಕಿನ ರಥ ಮುನ್ನಡೆಸಲು ತನಗೆ ಬರಬೇಕಾದ ಪಿಂಚಣಿ ಹಣಕ್ಕಾಗಿ ಫಕೀರನಂತೆ ಪರದಾಡಿದ್ದರ ಮಧ್ಯೆಯೂ ಅಲೌಕಿಕ ದರ್ಶನದ ಕಾವ್ಯನಿಧಿಯನ್ನು ಭವಿತವ್ಯದ